## Government of Karnataka
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 33/2021 |

ದಿನಾಂಕ 25-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 2 ಪ್ರಾಸಾಃ 2

| | |
|---|---|
| ಹೆಸರು | ವೀರೇಶ ಬಾಬು |
| ತಂದೆಯ ಹೆಸರು | ಅಶ್ವತ್ಥ ನಾರಾಯಣ |
| ವಯಸ್ಸು | 53 ವರ್ಷ |
| ಉದ್ಯೋಗ | ಕಂದಾಯ ನಿರೀಕ್ಷಕರು |
| ವಾಸಸ್ಥಳ | ಮಸ್ಕಿ ತಾಲುಕು ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು 2019 ರಿಂದ ಡಿಸೆಂಬರ್ 2020 ರವರೆಗೆ ದೇವದುರ್ಗದ ಕಂದಾಯ ಕಛೇರಿಯಲ್ಲಿ ಕಂದಾಯ ನಿರೀಕ್ಷಕರಾಗಿ ಕೆಲಸ ಮಾಡಿದ್ದೇನೆ. ಚಾಸಾ-1 ತಹಶೀಲ್ದಾರರು ನನಗೆ ಪರಿಚಯ ಇದ್ದಾರೆ. ಸಾಕ್ಷಿಯು ಮಹಜರನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ:ಪಿ-1 ಎಂದು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-1(ಎ) ಎಂದು ಗುರುತಿಸಲಾಯಿತು. 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಜಡ್ ಪಿ ಸರ್ಕಲ್‌ನಿಂದ ತಹಶೀಲ್ದಾರ ಕಚೇರಿಗೆ ಹೋಗುವ ರಸ್ತೆಯಲ್ಲಿ ಶೆಡ್ ಮಾಡಿ ಗಣೇಶನ ವಿಗ್ರಹ ಇಟ್ಟಿದ್ದರು ಆ ಸಮಯದಲ್ಲಿ ಮಹಜರ ಮಾಡಿದರು. ಆಗ ಚಾಸಾ-1, 3 ಮತ್ತು 7 ರವರು ಇದ್ದರು. ಆ ಸಮಯದಲ್ಲಿ

ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇತ್ತು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಈ ಬಗ್ಗೆ ಚಾಸಾ-1 ರವರು ಅವರಿಗೆ ಹೇಳಿದರು ಮತ್ತು ಪಿ ಎಸ್ ಐ ರವರಿಗೆ ಪೋನ್ ಮಾಡಿದರು. ಸ್ಪೀಕರನ್ನು ತೆಗೆದುಕೊಂಡು ಹೋಗುತ್ತಿದ್ದರು, ಆಗ ಚಾಸಾ-1 ರವರು ಸ್ಪೀಕರನ್ನು ಸೀಜ್ ಮಾಡುತ್ತೇವೆ ಪೋಲಿಸರು ಬಂದಾಗ ತೆಗೆದುಕೊಂಡು ಹೋಗಿ ಎಂದು ಹೇಳಿದರು. ಆಗ ನಿರಂಜನ ಮತ್ತು ಆತನ ಸ್ನೇಹಿತರು ಚಾಸಾ-1 ರವರಿಗೆ ಅವಮಾನವಾಗುವ ರೀತಿಯಲ್ಲಿ ಮಾತನಾಡಿ ನೀವು ಡಿ ಸಿ ನಾ ಪಿ ಎಸ್ ಐ ಇದ್ದೀರಾ ಎಂದು ಮಾತನಾಡಿದರು. ಸ್ಪೀಕರನ್ನು ಒಯ್ಯುವಾಗ ಚಾಸಾ-1 ರವರು ತಡೆದಾಗ ಆರೋಪಿತರು ಅವರನ್ನು ದಬ್ಬಾಡಿರುತ್ತಾರೆ ಆ ಸಮಯದಲ್ಲಿ ನಾವು ಅಲ್ಲಿ ಇದ್ದೇವು. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿರುತ್ತಾರೆ. ಈ ಬಗ್ಗೆ ನಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

1. ದಿನಾಂಕ: 26-08-2020 ರಂದು ನಾನು ಚಾಸಾ-1 ರವರು ಜೀಪಿನಲ್ಲಿ ಹೋಗುತ್ತಿದ್ದೇವು. ನಾವು ಸ್ಥಳಕ್ಕೆ ಹೋದಾಗ ಬೆಳಿಗ್ಗೆ 10-45 ಗಂಟೆಯಾಗಿತ್ತು. ಘಟೆನ ಮುಗಿದ ಮೇಲೆ ಪೋಲಿಸರು ಬಂದಿದ್ದರು. ಘಟನೆ ದಿನಾಂಕ: 26-08-2020 ಕ್ಕೆ 1 ತಾಸಿನವರೆಗೆ ಆಗಿರುತ್ತದೆ. ಘಟನೆ ಮುಗಿದ ಮೇಲೆ ಚಾಸಾ-1 ರವರು ದೂರು ಕೊಟ್ಟು ಎಫ್ ಐ ಆರ್ ಮಾಡಿಸಿದರು ನಾನು ಅವರ ಜೊತೆ ಹೋಗಿರುತ್ತೇನೆ. ದೂರನ್ನು ತಹಶೀಲ್ ಕಚೇರಿಯಲ್ಲಿ ಟೈಪ್‌ಮಾಡಿಸಿದರು. ತಹಶೀಲ್ ಕಚೇರಿಯಲ್ಲಿಯೇ ಪೋಲಿಸರಿಗೆ ದೂರನ್ನು ಕೊಟ್ಟಿರುತ್ತೇವೆ. ದೂರು ಕೊಟ್ಟಾಗ ಎಷ್ಟು ಸಮಯ ಆಗಿತ್ತು ನನಗೆ ನೆನಪಿಲ್ಲ. ನಾನು ಪೋಲಿಸ್ ಠಾಣೆಗೆ ಹೊಗಿಲ್ಲ . ಚಾಸಾ-1 ರವರು ಪೋಲಿಸ್ ಠಾಣೆಗೆ ಹೋದ

ಬಗ್ಗೆ ಗೊತ್ತಿಲ್ಲ. ನಿ ಪಿ 1 ಕ್ಕೆ ನಾನು ಮತ್ತು ಚಾಸಾ-3 ನು ಪೋಲಿಸ್ ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. 26-08-2020 ಮಧ್ಯಾಹ್ನಕ್ಕೆ ಪೋಲಿಸ್ ಠಾಣೆಗೆ ಹೋಗಿರುತ್ತೇನೆ ಸಮಯ ನನಗೆ ನೆನಪಿಲ್ಲ. ನಿ ಪಿ 1 ಪಂಚನಾಮೆಯಲ್ಲಿ ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿದೆ. ನಾನು ಓದಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ದೂರು ದಾಖಲಾದ ಮೇಲೆ ನಾನು ಸ್ಥಳಕ್ಕೆ ಹೋಗಿಲ್ಲ.

2. ಕೋವಿಡ್ -19 ಸಾಂಕ್ರಾಮಿಕ ರೋಗ ನಿಯಂತ್ರಣ ಮಾಡಲು ಸರಕಾರ ಹೊರಡಿಸಿದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಗಣೇಶ ಕೂಡಿಸಲು ಅನುಮತಿ ಪಡೆದಿರುವ ಬಗ್ಗೆ ನಿಗೆ ಗೊತ್ತಿದೆಯಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಆ ಸಮಯಲದಲ್ಲಿ ಕಂದಾಯ ನಿರೀಕ್ಷಕನಾಗಿದ್ದೇನು. ಘಟನಾ ಸ್ಥಳದಲ್ಲಿ ಛಾಯಾ ಚಿತ್ರ ತೆಗೆದ ಬಗ್ಗೆ ಮತ್ತು ವಿಡಿಯೋ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಪ್ರಭಾರಿ ತಹಶೀಲ್ದಾರ ಕರ್ತವ್ಯದಲ್ಲಿದ್ದರು. ಈ ಪ್ರಕರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ತಹಶೀಲ್ದಾರರು ಸುಳ್ಳು ದೂರು ಕೊಟ್ಟಿದ್ದಾರೆ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-3 ಮತ್ತು 7 ರವರು ಸ್ಪೀಕರನ್ನು ತೆಗೆಯಬಾರದು ಪೋಲಿಸರು ಬರುತ್ತಿದ್ದಾರೆ ಎಂದು ಹೇಳಿದ್ದಕ್ಕೆ ಅವರಿಗೆ ಆರೋಪಿತರು ದೊಬ್ಬಾಡಿರುತ್ತಾರೆ. ಆ ದಿನ ಆರೋಪಿತರು ಕೋವಿಡ್ 19 ನಿಯಮ ಪ್ರಕಾರ ಮಾಸ್ಕ ಧರಿಸಿರಲಿಲ್ಲ ಸಾಮಾಜಿಕ ಅಂತರ ಕಾಪಾಡಲಿಲ್ಲ ಎಂದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

## Government of Karnataka
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 33/2021 |

ದಿನಾಂಕ 25-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 2

| | |
|---|---|
| ಹೆಸರು | ದಂಡಪ್ಪ |
| ತಂದೆಯ ಹೆಸರು | ಹನುಮಯ್ಯ |
| ವಯಸ್ಸು | 45 ವರ್ಷ |
| ಉದ್ಯೋಗ | ಗ್ರಾಮ ಸಹಾಯಕ |
| ವಾಸಸ್ಥಳ | ತಿಲಕ ಓಣಿ ದೇವದುರ್ಗ ತಾಲುಕು ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ಸುಮಾರು 4 ವರ್ಷದಿಂದ ದೇವದುರ್ಗದ ಗ್ರಾಮ ಸಹಾಯಕ ಎಂದು ಕೆಲಸ ಮಾಡುತ್ತಿದ್ದೇನೆ. ಚಾಸಾ-1 ತಹಶೀಲ್ದಾರರು, ಚಾಸಾ-2 ಕಂದಾಯ ನಿರೀಕ್ಷಕರು. ದಿನಾಂಕ: 26-08-2020 ರಂದು ಬೆಳಿಗ್ಗೆ 10-45 ರಿಂದ 11-45 ಗಂಟೆಯವರೆಗೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ಘಟನೆಯ ಬಗ್ಗೆ ನನಗೆ ಏನು ಮಾಹಿತಿ ಇಲ್ಲ. ಪೋಲಿಸರು ನನಗೆ ವಿಚಾರ ಮಾಡಿಲ್ಲ. ಸಾಕ್ಷಿಯು ಮಹಜರನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ:ಪಿ-1 ಎಂದು ಗುರುತಿಸಲಾಗಿದ್ದು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ:ಪಿ-1(ಬಿ) ಎಂದು

ಗುರುತಿಸಲಾಯಿತು. ಯಾಕೆ ಸಹಿ ಮಾಡಿದ್ದೇನೆ ನನಗೆ ಗೊತ್ತಿಲ್ಲ. ನಿ ಪಿ 1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಪ್ರಾರ್ಥಿಸುತ್ತಾರೆ. ಅನುಮತಿ ನೀಡಲಾಯಿತು.)

**ಪಾಟೀ ಸವಾಲು: ಸ.ಸ.ಅ. ರವರಿಂದ:**

ದಿನಾಂಕ: 24-08-2020 ರಮದು ದೂರುದಾರರು ಸರಕಾರಿ ಜೀಪನಲ್ಲಿ ಸಂಚರಿಸುತ್ತಿದ್ದಾಗ ರಾತ್ರಿ 7-45 ಗಂಟೆಗೆ ಅಯ್ಯಪ್ಪ ದವಖಾನೆ ಎದುರಗಡೆ ಗಣೇಶ ವಿಗ್ರಹ ಕೂಡಿಸಿದ ಸ್ಥಳಕ್ಕೆ ಬಂದಿದ್ದು ಅಲ್ಲಿ ಯಾವುದೇ ಸಾಮಾಜಿಕ ಅಂತರ ಕಾಯಿದುಕೊಳ್ಳದೆ ಮಾಸ್ಕ್ ದರಿಸದೆ ಕರೋನಾ ರೋಗದ ಸಂಬಂಧ ನಿರ್ಲಕ್ಷ್ಯ ವಹಿಸಿದ್ದು ಕಂಡು ಬಂದಿತ್ತು ಎಂದರೆ ಸರಿಯಲ್ಲ. 2 ದೊಡ್ಡ ಸ್ಪೀಕರ್‌ಗಳನ್ನು ಹಚ್ಚಿ ಜೋರಾಗಿ ಧ್ವನಿಯನ್ನುದ ಮಾಡಿದರು ಎಂದರೆ ಸರಿಯಲ್ಲ. ಚಾಸಾ-1 ರವರು ಸ್ಪೀಕರನ್ನು ತೆಗೆಯಿರಿ ಎಂದು ಅಂದಿದ್ದಕ್ಕೆ ಆರೋಪಿತರು ಸ್ಪೀಕರನ್ನು ತೆಗೆಯುವುದಿಲ್ಲ ದೌರ್ಜನ್ಯ ಮಾಡುತ್ತಿದ್ದಿರಾ ಎಂದು ನಿಮಗೆನು ದೇವದುರ್ಗ ಬರೆದುಕೊಟ್ಟಿದ್ದಾರಾ ದೇವದುರ್ಗದ ಡಿ ಸಿ ನಾ , ಪಿ ಎಸ್ ಐ ಎಂದು ಬೈದಿದ್ದರು ಎಂದರೆ ಸರಿಯಲ್ಲ. ಸ್ಪೀಕರನ್ನು ತೆಗೆಯಲು ಹೋದಾಗ ದಬ್ಬಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ಪಮಚನಾಮೆ ಮಾಡಿದ್ದು ನಾನು ಸಹಿ ಮಾಡಿದ್ದೇನೆಂದರೆ ಸರಿಯಲ್ಲ. ಪಂಚನಾಮೆ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ